# ಚಿತ್ರಗಳಲ್ಲಿ ಏನೇನೋ ಅರ್ಥಗಳು!



**‘ಬೆಂಗಳೂರು ಆರ್ಟ್ ಫೌಂಡೇಷನ್ ಅಂಕ’ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಇದೇ ಸೆ.30ರಿಂದ ಚಿತ್ರಕಲಾ ಪ್ರದರ್ಶನವೊಂದನ್ನು ಏರ್ಪಡಿಸಿದೆ. ಪ್ರಬುದ್ಧವಾದ, ಈ ಅಮೂರ್ತ ಚಿತ್ರಗಳನ್ನು ರಚಿಸಿದವರು ಮಾತ್ರ ಪ್ರಬುದ್ಧ ವಯಸ್ಸಿನವರಲ್ಲ. ಎಂಟು ವರ್ಷದ ಬಾಲಕಿ ಧೃತಿಜಾ!**

ಪುಸ್ತಕಕ್ಕೆ ಮುಖಪುಟದ ಚಿತ್ರ ಬರೆಯುವುದು ಒಂದು ಗಂಭೀರ ಕಲೆ. ಬರಹಗಾರರು, ಕಲಾವಿದರು ಇದನ್ನು ಗಂಭೀರವಾಗಿಯೇ ತೆಗೆದುಕೊಂಡಿದ್ದಾರೆ. ಪುಸ್ತಕವನ್ನು ಯಾರು ಬರೆದಿದ್ದಾರೆ ಎಂಬುದು ಎಷ್ಟು ಮುಖ್ಯವೋ, ಆ ಪುಸ್ತಕದ ಮುಖಪುಟ ಹೇಗೆ ಮೂಡಿಬಂದಿದೆ? ಅದನ್ನು ರಚಿಸಿದ ಕಲಾವಿದ ಯಾರು? ಎನ್ನುವುದು ಸಹ ಅಷ್ಟೇ ಮುಖ್ಯ. ಬಹುತೇಕ ಪುಸ್ತಕಗಳ ಮುಖಪಟದ ಚಿತ್ರ ಅಥವಾ ವಿನ್ಯಾಸ ಮಾಡಿಕೊಟ್ಟವರು ನಾಡಿನ ಹೆಸರಾಂತ ಕಲಾವಿದರು.



ಆದರೆ ಇಲ್ಲೊಬ್ಬಳು ಎಂಟು ವರ್ಷದ ಹುಡುಗಿ ಬರೆದ ಚಿತ್ರವನ್ನು ಪುಸ್ತಕದ ಮುಖಪುಟಕ್ಕೆ ಬಳಸಿಕೊಳ್ಳಲಾಗಿದೆ ಎಂದರೆ ನಂಬುವುದು ತುಸು ಕಷ್ಟವೇ. ಆದರೂ ಇದು ಸತ್ಯ. ಬೆಂಗಳೂರಿನ ಸಿಲಿಕಾನ್ ಸಿಟಿ ಪಬ್ಲಿಕ್ ಸ್ಕೂಲ್‌ನಲ್ಲಿ 3ನೇ ತರಗತಿ ಓದುತ್ತಿರುವ ಧೃತಿಜಾ ಸಾತವಲ್ಲಿ ಎಂಬ ಬಾಲಕಿಯೇ ಅಂತಹ ಅಪರೂಪದ ಪ್ರತಿಭಾವಂತೆ. ಬಣ್ಣ, ರೇಖೆಗಳೊಂದಿಗೆ ಆಟವಾಡುವುದೆಂದರೆ ಧೃತಿಜಾಗೆ ಬಲು ಹಿಗ್ಗು.

ಅಂತೆಯೇ ಬಹಳಷ್ಟು ಅರ್ಥ ಹೇಳುವ, ಅಮೂರ್ತ ಕಲೆಯ ಈ ಚಿತ್ರವನ್ನು ಅವಳ ತಾತ–ಸಾಹಿತಿ ಪುಸ್ತಕಮನೆ ಹರಿಹರಪ್ರಿಯ ಅವರ ಅನುವಾದದ ಪುಸ್ತಕಕ್ಕೆ ಬಳಸಿಕೊಳ್ಳಲಾಗಿದೆ. ತೆಲುಗಿನ ಸಂಜೀವ್‌ದೇವ್ ರಚಿಸಿರುವ ‘ಪೂರ್ವ ಪಶ್ಚಿಮ ಅಪೂರ್ವರು’ ಎಂಬ ಈ ಪುಸ್ತಕವನ್ನು ಹರಿಹರಪ್ರಿಯ ಕನ್ನಡಕ್ಕೆ ಅನುವಾದಿಸಿದ್ದು ಇದೇ ಅ.2ರಂದು ಬಿಡುಗಡೆಯಾಗಲಿದ್ದು, ಮುಖಪುಟದಿಂದಾಗಿ ಮತ್ತಷ್ಟು ಗಮನ ಸೆಳೆದಿದೆ.

ಹೇಳಿ– ಕೇಳಿ ತಾತ. ಮೊಮ್ಮಗಳ ಮೇಲಿನ ಕಕ್ಕುಲಾತಿಗೆ ಇದನ್ನು ಬಳಸಿಕೊಂಡಿದ್ದಾರೆ ಎನ್ನುವಂತಿಲ್ಲ. ಯಾಕೆಂದರೆ, ಹೆಸರಾಂತ ಚಿತ್ರ ಕಲಾವಿದರಾದ ಸಿ.ಚಂದ್ರಶೇಖರ್, ಕೃಷ್ಣ ರಾಯಚೂರು, ಡಾ.ಎಂ.ಎಸ್.ಮೂರ್ತಿ ಅವರೇ ಈ ಚಿತ್ರ ಮುಖಪುಟಕ್ಕೆ ಅತ್ಯಂತ ಸೂಕ್ತವಾಗಿದೆ ಎಂದು ಸರ್ಟಿಫೈ ಮಾಡಿದ್ದಾರೆ.

ಇದೊಂದೇ ಅಲ್ಲ, ಇಂತಹ ಇನ್ನೂ ಸಾಕಷ್ಟು ಅಮೂರ್ತ ಚಿತ್ರಗಳನ್ನು ಧೃತಿಜಾ ಚಿತ್ರಿಸಿದ್ದಾಳೆ. ಹುಟ್ಟಿನೊಂದಿಗೇ ಅವಳದನ್ನು ರೂಡಿಸಿಕೊಂಡುಬಿಟ್ಟಿದ್ದಾಳೆ. ತಾಯಿ ಜಾಗೃತಿ ಪ್ರಿಯರ ಪ್ರೋತ್ಸಾಹ, ಚಿತ್ರಕಲೆ ಇತಿಹಾಸದ ಬಗ್ಗೆ ಅಧಿಕೃತವಾಗಿ ಮಾತನಾಡುವ ತಾತ ಹರಿಹರಪ್ರಿಯರ ಪ್ರೋತ್ಸಾಹ ಆಕೆಯ ಬೆನ್ನಿಗಿದೆ.

ಎಂಟು ವರ್ಷದ ಹುಡುಗಿಯೊಬ್ಬಳ ಚಿತ್ರ ಕಲಾ ಪ್ರದರ್ಶನವೇ ಇಲ್ಲಿನ ಮತ್ತೊಂದು ಅಚ್ಚರಿ. ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಅಕ್ಟೋಬರ್ 3ರ ವರೆಗೆ ನಡೆಯುವ ಈ ಚಿತ್ರ ಕಲಾ ಪ್ರದರ್ಶನವನ್ನು ಹಿರಿಯ ಕಲಾವಿದ ಸಿ.ಚಂದ್ರಶೇಖರ್ ಸೆ.30ರಂದು ಉದ್ಘಾಟಿಸಲಿದ್ದಾರೆ.

–ಜಿಎನ್

